ಬಿಟ್ಟಿರಲಾರದೆ ರಾಜಧಾನಿಯಲ್ಲೇ ತಂಗಲು ನಿರ್ಧರಿಸಿದನು.

ಆದ್ದರಿಂದ ಅಮ್ಮನನ್ನೂ ತನ್ನನ್ನೂ ಮಾತ್ರ ಕರೆದುಕೊಂಡು ಅಶ್ವಾರೋಹಿಣಿಯರ ಪಡೆಯೊಂದಿಗೆ ಪಯಣಿಸಿ ಬಂದು ರಾಜಗುಡಾರದಲ್ಲಿ ಠಿಕಾಣಿ ಹೂಡಿದರು ಅಪ್ಪಾಜಿಯವರು.

ಬಂದ ಒಂದೆರಡು ದಿನಗಳಲ್ಲೇ ಎಲಹಂಕ ನಾಡಿನ ಪ್ರಾಧಾನಿ ಮಂಗಪ್ಪ ದಣ್ಣಾಯಕರೂ ಇನ್ನಿತರ ಅಧಿಕಾರಿಗಳೂ ಸ್ಥಳಕ್ಕೇ ಆಗಮಿಸಿದರು. ಅಪ್ಪಾಜಿಯವರಿಗೆ ಅವರೊಂದಿಗೆ ಹೋಗಿ ಮಂತ್ರಾಲೋಚನೆ ನಡೆಸಬೇಕಾದ ನಿರ್ಬಂಧವೇರ್ಪಟ್ಟಿತು.

'ಛೆ, ಪ್ರವಾಸಕ್ಕೆ ಬಂದಕಡೆಯೂ ರಾಜಕಾರ್ಯವೇ? ಇರಲಿ, ಅವರು ಹಿಂದಿರುಗಲಿ. ಇವತ್ತೆಲ್ಲ ಅವರೊಂದಿಗೆ ಮಾತನಾಡುವುದೇ ಇಲ್ಲ.' ನಿರಾಶೆಯಿಂದ ಕರುಬಿದಳು ವಿರೂಪಾಕ್ಷಿ.

ಗುಡಾರದಲ್ಲಿ ಕುಳಿತಿರುವುದು ಅವಳಿಗೆ ಬಹಳ ಬೇಸರವನ್ನುಂಟುಮಾಡಿತು. ಹಾಡು, ನೃತ್ಯ, ಆಟ, ಸಿಂಗಾರ ಮುಂತಾದ ಯಾವ ಮನರಂಜನೆಯೂ ಅವಳಿಗೆ ಬೇಡವಾಯಿತು. ಬೇಸರ ಕಳೆಯಲು ಗುಡಾರವನ್ನು ಬಿಟ್ಟು ದೂರದಲ್ಲಿ ಕಂಡ ಚಿಕ್ಕ ಊರನ್ನು ನೋಡಲು ಕಾಲ್ನಡಿಗೆಯಲ್ಲೇ ಹೊರಟುಬಿಟ್ಟಳು.



"ಬೇಡ ಮಗಳೇ! ಇದು ನಮಗೆ ಪರಿಚಯವಿಲ್ಲದ ಬಹಳ ಸಣ್ಣ ಊರು. ನಮ್ಮ ಊರ ವಿರೂಪಾಕ್ಷ ದೇವಾಲಯದಂತಹ ಭವ್ಯ ಗುಡಿಗಳಾಗಲಿ, ಗುಲಾಬಿ ಹೂವುಗಳಿಂದ ಹಿಡಿದು ಮುತ್ತು, ರತ್ನ, ವಜ್ರ, ವೈಡೂರ್ಯಗಳವರೆಗೆ ಮಾರಾಟವಾಗುವಂತಹ ಬಜಾರುಗಳು ಇಲ್ಲಿ ಇರಲು ಸಾಧ್ಯವಿಲ್ಲ. ಇನ್ನೇನು, ಅಪ್ಪಾಜಿಯವರು ಬಂದುಬಿಡಲಿ. ನೀನು ಅವರೊಂದಿಗೆ ಸುತ್ತಾಡಲು ಹೋದರೆ ನನಗೆ ಯಾವ ಅಭ್ಯಂತರವೂ ಇಲ್ಲ. ಒಬ್ಬಳೇ ಹೋಗೋದು ಮಾತ್ರ ಬೇಡ."

ಅಮ್ಮನ ಮಾತನ್ನು ಲಕ್ಷಿಸದೆ, ಅವಳು ಜೊತೆಯಲ್ಲಿ ಕಳುಹಿಸಲಿದ್ದ ಯೋಧರನ್ನೂ ಬೇಡವೆಂದು ಅಲ್ಲಗಳೆದು, ಕಾಂತಿಯನ್ನು ಮಾತ್ರ ಜೊತೆಗೆ ಕರೆದುಕೊಂಡು ಗುಡಾರವನ್ನು ಬಿಟ್ಟು ಬಿರಬಿರನೆ ಹೊರಟಿದ್ದಳು ವಿರೂಪಾಕ್ಷಿ.

ಹಾಗೆ ಹೊರಟಿದ್ದರಿಂದಲೇ ತಾನೆ ಸೋಮೇ ದೇವರನ್ನು ಕಾಣುವ ಅವಕಾಶ ಸಿಕ್ಕಿತು; ಈ ಸುಂದರವಾದ ಸೀಮೆಯ ಚೆಲುವನ್ನು ಕಣ್ತುಂಬ ಕಾಣುವಂತಾಯಿತು!

'ಮಗಳು ಇನ್ನೂ ಗುಡಾರ ಸೇರಿಲ್ಲವಲ್ಲ' ಎಂಬ ಆತಂಕದೊಂದಿಗೆ ಒಳಗೇ ಕುಳಿತು ಚಡಪಡಿಸುತ್ತಿದ್ದ